ಓ.ಎಸ್. ನಂಬರ 40/2018

ಪಿ.ಡಬ್ಲ್ಯೂ-1

ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು. ದಿನಾಂಕಃ 27-11-2024.

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿಯರ ಪರ ಶ್ರೀ. ಬಿ.ಎಫ್.ಪಿ. ವಕೀಲರಿಂದಃ**

ಸರ್ವೇ ನಂ.72/3 ಕ್ಷೇತ್ರ 4 ಎಕರೆ 19 ಗುಂಟೆ 10 ಆಣೆ ಎಂದು ವಾದ ಪತ್ರ ಮತ್ತು ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ನಮೂದು ಮಾಡಿರುತ್ತೇನೆ ಎಂದರೆ ತಪ್ಪಾಗಿ ನಮೂದಾಗಿರುತ್ತದೆ ಎಂದು ನುಡಿಯುತ್ತಾರೆ. ಈ ರೀತಿ ತಪ್ಪಾಗಿ ನಮೂದಾಗಿರುವುದು ನಮಗೆ ತಿಳಿದು ಬಂದಿರುತ್ತದೆ ಎಂದರೆ ಸ್ವಲ್ಪ ದಿನಗಳ ಹಿಂದೆ ನನಗೆ ತಿಳಿದುಬಂದಿರುತ್ತದೆ ಎಂದು ನುಡಿಯುತ್ತಾರೆ. ಸರ್ವೇ ನಂ. 72/3 ರ ನಿವ್ವಳ ಕ್ಷೇತ್ರ ಹೇಳಬಹುದೆ ಎಂದರೆ 4 ಎಕರೆ 19 ಗುಂಟೆ ಎಂದು ನುಡಿಯುತ್ತಾರೆ. ಸರ್ವೇ ನಂ. 72/3 ರ ಪಹಣಿ ಪತ್ರಿಕೆಯಲ್ಲಿ ಅದರ ಕ್ಷೇತ್ರ 4 ಎಕರೆ 20 ಗುಂಟೆ 10 ಆಣೆ ಎಂದು ಇರುತ್ತದೆ ಎಂದರೆ ಸರಿ, ಸಾಕ್ಷಿಯು ಮುಂದುವರೆದು ಪ್ರತಿಜ್ಞಾ ಪತ್ರಗಳನ್ನು ತಯಾರಿಸುವ ಕಾಲಕ್ಕೆ ತಪ್ಪಾಗಿ ನಮೂದಾಗಿರುತ್ತದೆ ಎಂದು ನುಡಿಯುತ್ತಾರೆ. ಪ್ರತಿಜ್ಞಾ ಪತ್ರದಲ್ಲಿ ತಪ್ಪಾಗಿ ನಮೂದಾಗಿರುತ್ತದೆ ಎಂದು ಹೇಳಿದ್ದು, ಅದನ್ನು ಸರಿಪಡಿಸಿಕೊಳ್ಳಲು ಪ್ರಯತ್ನಿಸಿರುತ್ತೀರೇ ಎಂದರೆ ನನಗೆ ಗೊತ್ತಾಗಿರುವುದಿಲ್ಲ ಎಂದು ನುಡಿಯುತ್ತಾರೆ. ಸರ್ವೇ ನಂ. 72/1 ಯಾರ ಹೆಸರಿಗೆ ಇದೆ ಎಂದರೆ ಬೈರು ದನಗರ ಗೌಳಿ ಇವರ ಹೆಸರಿಗೆ ಇದೆ ಎಂದು ನುಡಿಯುತ್ತಾರೆ. ಸರ್ವೇ ನಂ.72/1, 72/2 ಮತ್ತು 72/3 ರ ಚಕ್ಕುಬಂದಿ ಹೇಳಲು ಬರುತ್ತದೆಯೇ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ನನಗೆ ದಾವಾಸ್ತಿಗಳ ಬಗ್ಗೆ ಸಂಪೂರ್ಣ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ನನ್ನ ವಾದ ಪತ್ರದಲ್ಲಿ ವಂಶವೃಕ್ಷವನ್ನು ಕಾಣಿಸಿರುತ್ತೇನೆ ಎಂದರೆ ಸರಿ. ಸದರಿ ವಂಶವೃಕ್ಷದಲ್ಲಿ ಮೂಲ ಪುರುಷನಿಗೆ 3 ಜನ ಗಂಡು ಮಕ್ಕಳಿರುವುದಾಗಿ ತೋರಿಸಿರುತ್ತೇನೆ. ಮೂಲ ಪುರುಷನಿಗೆ ಒಬ್ಬ ಹೆಣ್ಣು ಮಗಳೂ ಸಹ ಇದ್ದಾಳೆ ಎಂದರೇ ಇಲ್ಲ ಎಂದು ನುಡಿಯುತ್ತಾರೆ. ಮೂಲ ಪುರುಷನ ಮಗಳ ಹೆಸರು ಸಕ್ಕುಬಾಯಿ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಆಕೆ ಮೂಲ ಪುರುಷನ ಸ್ವಂತ ಮಗಳು ಅಲ್ಲ ಎಂದು ನುಡಿಯುತ್ತಾರೆ. ಆಕೆಯನ್ನು ಬಿಟ್ಟು ನಾನು ಈ ದಾವೆಯನ್ನು ಹೂಡಿರುವುದರಿಂದ ಈ ದಾವೆ ಕಾಯಿದೆ ಪ್ರಕಾರ ನಡೆಯುವುದಿಲ್ಲ ಎಂದರೆ ಸರಿಯಲ್ಲ, ಸಾಕ್ಷಿಯು ಮುಂದುವರೆದು ಆಕೆ ಸಾಕು ಮಗಳಾಗಿರುತ್ತಾಳೆ ಎಂದು ನುಡಿಯುತ್ತಾರೆ. ಸಕ್ಕುಬಾಯಿ ಮೂಲ ಪುರುಷನ ಸ್ವಂತ ಮಗಳಲ್ಲ, ಆಕೆ ಸಾಕು ಮಗಳು ಎಂದು ತೋರಿಸಲು ದಾಖಲೆಗಳು ಇವೆಯೇ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಯರೇಬೈಲು ಗ್ರಾಮದ ಸರ್ವೇ ನಂ.72, ಮ್ಯುಟೇಶನ್ ಎಂಟ್ರಿ 325 ರಲ್ಲಿ ಮೂಲ ಪುರುಷನಿಗೆ ಸಕ್ಕುಬಾಯಿ ಎನ್ನುವ ಮಗಳು ಸಹ ಇರುತ್ತಾಳೆ ಎಂದು ನಮೂದಾಗಿರುತ್ತದೆ ಎಂದರೆ ಸಾಕ್ಷಿಯು ಆಕೆಯು ಸಾಕು ಮಗಳಾಗಿರುತ್ತಾಳೆ ಎಂದು

ನುಡಿಯುತ್ತಾರೆ. 1 ನೇ ವಾದಿ ನನ್ನ ತಂದೆ ಎಂದರೆ ಸರಿ. ನನ್ನ ವಾದ ಪತ್ರದಲ್ಲಿ ನಮೂದಿಸಿದ ವಂಶವೃಕ್ಷದಲ್ಲಿ ವಿಠ್ಠು ಎನ್ನುವವರನ್ನು 1 ನೇ ವಾದಿ ಎಂದು ತೋರಿಸಿರುತ್ತೇನೆಯೇ ಎಂದರೆ ಪ್ರತಿವಾದಿ ಎಂದು ತೋರಿಸಿರುತ್ತೇನೆ, ಅದು ತಪ್ಪಾಗಿ ನಮೂದಾಗಿರಬಹುದು ಎಂದು ನುಡಿಯುತ್ತಾರೆ. ನನ್ನ ತಂದೆಯವರಿಗೆ ಈ ದಾವೆಯನ್ನು ಹೂಡುವ ಕಾಲಕ್ಕೆ 48 ವರ್ಷ ವಯಸ್ಸಾಗಿರುತ್ತದೆ ಎಂದರೆ ತಪ್ಪಾಗಿ ನಮೂದಾಗಿರುತ್ತದೆ, ಅವರಿಗೆ 52 ವರ್ಷವಾಗಿತ್ತು ಎಂದು ನುಡಿಯುತ್ತಾರೆ. ದಾವೆ ಮಾಡುವ ಕಾಲಕ್ಕೆ 2 ನೇ ವಾದಿಗೆ ಸುಮಾರು 21 ವರ್ಷ ವಯಸ್ಸಾಗಿರುತ್ತದೆ. ಅದೇ ರೀತಿ 3 ನೇ ವಾದಿಗೆ ದಾವೆ ಹೂಡುವ ಕಾಲಕ್ಕೆ 18 ವರ್ಷ ವಯಸ್ಸಾಗಿರುತ್ತದೆ. ದಿಃ 30-01-1991 ರಲ್ಲಿ 2 ಮತ್ತು 3 ನೇ ವಾದಿ ಜನಿಸಿರಲಿಲ್ಲ ಎಂದರೆ ಸರಿ. ದಾವಾಸ್ತಿಯ ಬಗ್ಗೆ ಸರ್ವೆ ನಂ. 72/1 ಮಾರಾಟ ಆಗುವ ಕಾಲಕ್ಕೆ ಅಂದರೆ ದಿಃ 30-01-1991 ರಲ್ಲಿ 2 ಮತ್ತು 3 ನೇ ವಾದಿ ಜನಿಸದೇ ಇದ್ದ ಕಾರಣ ಅವರಿಗೆ ಈ ದಾವೆಯನ್ನು ಹೂಡುವ ಅಧಿಕಾರ ಇಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ದಾವಾಸ್ತಿಯು ಅವರ ಅಜ್ಜನ ಆಸ್ತಿಯಾದ ಕಾರಣ ಅವರಿಗೆ ಅಧಿಕಾರ ಇರುತ್ತದೆ ಎಂದು ನುಡಿಯುತ್ತಾರೆ. ಮೂಲ ಪುರುಷನ ಮಗ ಜಾನು ಯಾವ ದಿನಾಂಕಕ್ಕೆ ತೀರಿಕೊಂಡಿರುತ್ತಾನೆ ಎಂದು ಹೇಳಬಹುದೇ ಎಂದರೆ ನನಗೆ ದಿನಾಂಕ ನೆನಪಿಲ್ಲ. ಸದರಿ ಜಾನು ರವರ ಮರಣ ಪ್ರಮಾಣ ಪತ್ರವನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ಸದರಿ ಜಾನು ಯರೇಬೈಲು ಗ್ರಾಮ ಬಿಟ್ಟು ಹಳಿಯಾಳದ ತಟ್ಟಿಹಳ್ಳಕ್ಕೆ ಯಾವಾಗ ಹೋಗಿರುತ್ತಾರೆ ಎಂದು ಹೇಳಬಹುದೇ ಎಂದರೆ 1993 ರಲ್ಲಿ ಹೋಗಿರುತ್ತಾರೆ ಎಂದು ನುಡಿಯುತ್ತಾರೆ. ನನ್ನ ಅಜ್ಜ ಯರೇಬೈಲು ಗ್ರಾಮ ಬಿಟ್ಟು ಹಳಿಯಾಳದ ತಟ್ಟಿಹಳ್ಳಕ್ಕೆ ಹೋದಾಗ ನಾನು ಜನಿಸಿದ್ದೇನೆಯೇ ಎಂದರೆ ಇಲ್ಲ ಎಂದು ನುಡಿಯುತ್ತಾರೆ ಸಾಕ್ಷಿಯು ಮುಂದುವರೆದು ನಾನು ತಟ್ಟಿಹಳ್ಳದಲ್ಲಿ ದಿಃ 18-03-1992 ರಂದು ಜನಿಸಿರುತ್ತೆನೆ ಎಂದು ನುಡಿಯುತ್ತಾರೆ. ಸದರಿ ಸಮಯಕ್ಕೆ ನಾನು ಹುಟ್ಟದೇ ಇದ್ದ ಕಾರಣ ಯರೇಬೈಲು ಗ್ರಾಮದಲ್ಲಿ ಏನು ನಡೆದಿರುತ್ತದೆ ಎಂದು ನನಗೆ ವೈಯಕ್ತಿಕ ಮಾಹಿತಿ ಇರುವುದಿಲ್ಲ ಎಂದರೆ ಸರಿಯಲ್ಲ, ನಾನು ನನ್ನ ತಂದೆಯವರಿಂದ ಮತ್ತು ಅಜ್ಜನಿಂದ ಎಲ್ಲಾ ತಿಳಿದುಕೊಂಡಿರುತ್ತೇನೆ ಆ ನಂತರ ಈ ದಾವೆಯನ್ನು ಹೂಡಿರುತ್ತೇನೆ ಎಂದು ನುಡಿಯುತ್ತಾರೆ. ನಮ್ಮ ಅಜ್ಜ ತೀರಿಕೊಂಡ ನಂತರ ಆಕುಮೆ ನಾತೆಯಿಂದ ಸರ್ವೆ ನಂ. 72 ಜಾನು ರವರ ಹೆಸರಿಗೆ ನಮೂದಾಗಿರುತ್ತದೆ ಎಂದರೆ ಸರಿ. ಸರ್ವೆ ನಂ. 72 ರಲ್ಲಿ ಮೂಲಪುರುಷನ ಮಕ್ಕಳಾದ ಜಾನು, ಬೈರು ಮತ್ತು ವಾಗು ಇವರಿಗೆ ಹಕ್ಕು ಇರುತ್ತದೆ ಎಂದರೆ ಒಟ್ಟು ಕ್ಷೇತ್ರದಲ್ಲಿ ಹಕ್ಕು ಇರುತ್ತದೆ ಎಂದು ನುಡಿಯುತ್ತಾರೆ. ದಾವಾಸ್ತಿಯಲ್ಲಿ ಅವರಿಗೆ ಹಿಸ್ಸೆ ಹಕ್ಕು ಇರುವುದರಿಂದಲೇ ಜಾನು ಮತ್ತು ಅವನ ಸಹೋದರರು 1991 ನೇ ಇಸ್ವಿಯಲ್ಲಿ ವಿಭಾಗ ಮಾಡಿಕೊಂಡಿರುತ್ತಾರೆ ಎಂದರೆ ವಾಂಟಣಿ ಆಗಿರುವುದಿಲ್ಲ ಎಂದು ನುಡಿಯುತ್ತಾರೆ. ನಾನು ಹಾಜರುಪಡಿಸಿದ ನಿಪಿ 6 ರ ಪ್ರಕಾರ 1991 ನೇ ಇಸ್ವಿಯಲ್ಲಿ ಜಾನು ಮತ್ತು ಅವರ ಸಹೋದರರು ದಾವಾಸ್ತಿಯನ್ನು ತಮ್ಮೊಳಗೆ

ವಾಂಟಣಿ ಮಾಡಿಕೊಂಡಿರುತ್ತಾರೆ ಎಂದು ಮ್ಯುಟೇಶನ್ ಎಂಟ್ರಿ ನಮೂದಾಗಿರುತ್ತದೆ ಎಂದರೆ ಸಾಕ್ಷಿಯು ಮೋಸ ಮಾಡಿ ಎಂಟ್ರಿ ಮಾಡಿಸಿಕೊಂಡಿರುತ್ತಾರೆ ಎಂದು ತೋರಿಸುವ ಸಲುವಾಗಿ ಸದರಿ ದಾಖಲೆಯನ್ನು ಹಾಜರುಪಡಿಸಿರುತ್ತೇನೆ ಎಂದು ನುಡಿಯುತ್ತಾರೆ. ಈ ರೀತಿ ಮೋಸ ಆಗಿರುತ್ತದೆ ಎಂದು ಮೂಲ ಪುರುಷನ ಗಂಡುಮಕ್ಕಳು ಸದರಿ ಮ್ಯುಟೇಶನ್ ಎಂಟ್ರಿಯ ವಿರುದ್ಧ ಮೇಲ್ಮನವಿ ಸಲ್ಲಿಸಿರುತ್ತಾರೆಯೇ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ನಿಪಿ6 ರ ಮ್ಯುಟೇಶನ್ ಎಂಟ್ರಿಯ ಪ್ರಕಾರ ಜಾನುರವರಿಗೆ ದಾವಾ ಸರ್ವೇ ನಂಬರಿನಲ್ಲಿ 4 ಎಕರೆ 19 ಗುಂಟೆ 12 ಆಣೆ ಬಂದಿದೆ, ಅದೇ ರೀತಿ ಬೈರು ರವರಿಗೆ 4 ಎಕರೆ 19 ಗುಂಟೆ 10 ಆಣೆ ಬಂದಿದ್ದು ಮತ್ತು ವಾಗುರವರಿಗೆ 4 ಎಕರೆ 19 ಗುಂಟೆ 10 ಆಣೆ ಬಂದಿರುತ್ತದೆ ಎಂದು ನಮೂದು ಆಗಿರುತ್ತದೆ ಎಂದರೆ ದಾಖಲೆಯಲ್ಲಿ ನಮೂದು ಆಗಿರುತ್ತದೆ, ಆದರೆ ಸದರಿ ದಾಖಲೆಯನ್ನು ಸೃಷ್ಟಿಸಲಾಗಿದೆ ಎಂದು ನುಡಿಯುತ್ತಾರೆ. ನಾನು ಹಾಜರುಪಡಿಸಿದ ದಾಖಲೆಗಳ ಪ್ರಕಾರ ದಾವಾ ಸರ್ವೇ ನಂಬರ್ 1991 ರಲ್ಲಿ ವಾಂಟಣಿ ಆಗಿರುತ್ತದೆ ಎಂದರೆ ಮ್ಯುಟೇಶನ್ ಎಂಟ್ರಿಯನ್ನು ಸೃಷ್ಠಿ ಮಾಡಲಾಗಿದೆ ಎಂದು ನುಡಿಯುತ್ತಾರೆ. 1991 ರಲ್ಲಿ ಮೂಲ ಪುರುಷನ ಮಕ್ಕಳು ತಮ್ಮೊಳಗೆ ವಾಂಟಣಿ ಮಾಡಿಕೊಂಡಿದ್ದರಿಂದ ಈ ದಾವೆಯನ್ನು ಹೂಡಲು ವಾದಿಯರಿಗೆ ಅಧಿಕಾರ ಇಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ವಾಂಟಣಿ ಆಗಿರುವುದಿಲ್ಲ ಎಂದು ನುಡಿಯುತ್ತಾರೆ. ಮೂಲ ಪುರುಷನ 3 ಜನ ಗಂಡು ಮಕ್ಕಳು 1991 ನೇ ಇಸ್ವಿಯಲ್ಲಿ ಒಟ್ಟಾಗಿ ಇದ್ದರು ಎಂದರೆ ಬೇರೆ ಬೇರೆಯಾಗಿ ಉಳಿದಿದ್ದರು ಎಂದು ನುಡಿಯುತ್ತಾರೆ. ಮೂಲ ಪುರುಷನ ಮಕ್ಕಳು ದಾವಾ ಸರ್ವೇ ನಂಬರನ್ನು ವಾಂಟಣಿ ಮಾಡಿಕೊಂಡ ಕಾರಣ ದಾವಾ ಸರ್ವೇ ನಂಬರಿಗೆ ಸಂಬಂಧಿಸಿದ ಪಹಣಿ ಪತ್ರಿಕೆಯಲ್ಲಿ ತಮ್ಮ ತಮ್ಮ ಹೆಸರಿಗೆ ಬಂದ ಕ್ಷೇತ್ರವನ್ನು ಪ್ರತ್ಯೇಕವಾಗಿ ನಮೂದಾಗಿಸಲಾಗಿದೆ ಎಂದರೆ ವಾಂಟಣಿ ಆಗಿಯೇ ಇರುವುದಿಲ್ಲ ಎಂದು ನುಡಿಯುತ್ತಾರೆ. 1991 ರ ಪೂರ್ವದಲ್ಲಿ ಸರಿಯಾಗಿ ಮಳೆ ಬರದೇ ಇದ್ದ ಕಾರಣ ನಮ್ಮ ಕುಟುಂಬ ಆರ್ಥಿಕವಾಗಿ ಸಂಕಷ್ಟದಲ್ಲಿ ಇತ್ತು ಎಂದರೆ ಸರಿಯಲ್ಲ. ಅದೇ ರೀತಿ ಇಂದೂರು ಸೊಸೈಟಿಯಲ್ಲಿ ತೆಗೆದುಕೊಂಡ ಸಾಲ ಕಟುಬಾಕಿ ಉಳಿದಿತ್ತು ಎಂದರೆ ಯಾವುದೇ ಸಾಲವನ್ನು ತೆಗೆದುಕೊಂಡಿರುವುದಿಲ್ಲ ಎಂದು ನುಡಿಯುತ್ತಾರೆ. ಜಾನು ರವರು 1989 ನೇ ಇಸ್ವಿಯಲ್ಲಿ ತನ್ನ ಮಗನ ಮದುವೆ ಮಾಡಿದ್ದನು ಎಂದರೆ ಸರಿ. ಅದಕ್ಕೆ ಹಣಕಾಸಿನ ಅಡಚಣೆಯೂ ಇತ್ತು ಎಂದರೆ ಸರಿ, ಸಾಕ್ಷಿಯು ಮುಂದುವರೆದು ಅದಕ್ಕೆ 4 ಸಾವಿರ ರೂಪಾಯಿಗಳನ್ನು ತೆಗೆದುಕೊಂಡಿದ್ದರು ಎಂದು ನುಡಿಯುತ್ತಾರೆ. ಆದ ಕಾರಣ ಜಾನುರವರು 4 ಎಕರೆ 19 ಗುಂಟೆ 12 ಆಣೆ ಕ್ಷೇತ್ರವನ್ನು ಮಾರಾಟಕ್ಕೆ ಹಚ್ಚಿದ್ದರು ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು 2 ಎಕರೆಯನ್ನು ಒತ್ತೆಗೆ ಕೊಟ್ಟಿರುತ್ತಾರೆ, ಮಾರಾಟ ಮಾಡಿರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ 4 ಎಕರೆ 19 ಗುಂಟೆ 12 ಆಣೆಗೆ ಸಂಬಂಧಿಸಿದಂತೆ ಕ್ರಯಪತ್ರ ಆಗುವ ಮೊದಲೇ ಜಾನುರವರು 7 ನೇ ಪ್ರತಿವಾದಿಯಿಂದ

ರೂಪಾಯಿ 15 ಸಾವಿರ ಗಳನ್ನು ಪಡೆದುಕೊಂಡಿದ್ದರು ಎಂದರೆ ಸಾಕ್ಷಿಯು ಮದುವೆ ಸಲುವಾಗಿ 4 ಸಾವಿರ ರೂಪಾಯಿಯನ್ನು ಮಾತ್ರ ತೆಗೆದುಕೊಂಡಿದ್ದರು, ಮಾರಾಟ ಮಾಡುವ ಸಲುವಾಗಿ ಪಡೆದು ಕೊಂಡಿರುವುದಿಲ್ಲ ಎಂದು ನುಡಿಯುತ್ತಾರೆ. 2 ನೇ ವಾದಿ ಜಾನುರವರು ಅಕುಮೆ ನಾತೆಯಿಂದ ಎಲ್ಲಾ ಕುಟುಂಬ ಸದಸ್ಯರ ಅನುಮತಿ ಪಡೆದು, ತನ್ನ ಮಗನ ಮದುವೆ ಮಾಡುವ ಸಲುವಾಗಿ ದಿಃ 04-10-2012 ರಂದು 7 ನೇ ಪ್ರತಿವಾದಿಯ ಹೆಸರಿಗೆ ನೋಂದಾಯಿತ ಕ್ರಯಪತ್ರವನ್ನು ಬರೆದುಕೊಟ್ಟಿರ್ತತ್ತಾರೆ ಎಂದರೆ ಆಸ್ತಿಯನ್ನು ಮಾರಾಟ ಮಾಡಿರುವುದಿಲ್ಲ, ಒತ್ತೆ ಹಾಕಲಾಗಿರುತ್ತದೆ ಎಂದು ನುಡಿಯುತ್ತಾರೆ. ಒತ್ತೆಗೆ ಕೊಟ್ಟ ವ್ಯವಹಾರದಲ್ಲಿ ಯಾರ್ಯಾರು ಇದ್ದರು ಎಂದು ಹೇಳಬಹುದೇ ಎಂದರೆ ನಮ್ಮ ಅಜ್ಜ ಒಬ್ಬರೇ ಆಸ್ತಿಯನ್ನು ಒತ್ತೆಗೆ ಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಒತ್ತೆ ಹಾಕಿರುತ್ತಾರೆ ಎಂದು ತೋರಿಸಲು ದಾಖಲೆಗಳು ಇವೆಯೇ ಎಂದರೆ ಬಾಯಿ ಮಾತಿನಲ್ಲಿ ಒತ್ತೆ ಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ದಾವಾಸ್ತಿ ಪೈಕಿ 2 ನೇ ವಾದಿ 4 ಎಕರೆ 19 ಗುಂಟೆ 12 ಆಣೆ ಕ್ಷೇತ್ರವನ್ನು 7 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದರೂ ಸಹಿತ ಒತ್ತೆಗೆ ಕೊಟ್ಟಿದ್ದಾರೆಂದು ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಖರೀದಿ ಮಾಡಿದ ದಿನದಿಂದ 7 ನೇ ಪ್ರತಿವಾದಿ ಆಸ್ತಿಯ ಮಾಲಿಕಳಾಗಿದ್ದು, ಅದರ ಕಬ್ಜಾ ವಹಿವಾಟಿನಲ್ಲಿ ಇದ್ದಾರೆ ಎಂದರೆ ಸಾಕ್ಷಿಯು ಆಸ್ತಿಯನ್ನು ಮಾರಾಟ ಮಾಡಿರುವುದಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಯು ಮುಂದುವರೆದು 7 ನೇ ಪ್ರತಿವಾದಿ 2 ಎಕರೆ ಕಬ್ಜೆಯಲ್ಲಿದ್ದಾರೆ ಎಂದು ನುಡಿಯುತ್ತಾರೆ. 7 ಮತ್ತು 8 ನೇ ಪ್ರತಿವಾದಿ ಪೂರ್ತಿ ಕ್ಷೇತ್ರದ ಕಬ್ಜೆಯಲ್ಲಿದ್ದರೂ ಸಹ ಅವರು 2 ಎಕರೆ ಕಬ್ಜೆಯನ್ನು ಮಾತ್ರ ಹೊಂದಿರುತ್ತಾರೆ ಎಂದು ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಮಾನ್ಯವಾಗಿ ಒಬ್ಬ ವ್ಯಕ್ತಿಯ ಹೆಸರಿಗೆ ಇರುವ ಆಸ್ತಿ ಇನ್ನೊಬ್ಬ ವ್ಯಕ್ತಿಯ ಹೆಸರಿಗೆ ಆಗಬೇಕೆಂದರೆ ನೋಂದಾಯಿತ ದಸ್ತಾವೇಜಿನ ಮೂಲಕವೇ ಆಗಬೇಕು ಎಂದರೆ ಸರಿ. 2 ನೇ ವಾದಿ 7 ನೇ ಪ್ರತಿವಾದಿಗೆ 4 ಎಕರೆ 19 ಗುಂಟೆ 12 ಆಣೆ ಬರೆದುಕೊಟ್ಟಿದ್ದರಿಂದ ಅವರು ಮಾಲಿಕರಾಗಿರುತ್ತಾರೆ ಎಂದರೆ ಮಾರಾಟ ಮಾಡಿರುವುದಿಲ್ಲ ಎಂದು ನುಡಿಯುತ್ತಾರೆ.

**ಮುಂದುವರೆದ ಪಾಟೀ ಸವಾಲಿಗೆ ವಕೀಲರು ಕಾಲಾವಕಾಶ ಕೇಳಿದ್ದು, ಕಲ್ಪಿಸಲಾಯಿತು.**

ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ. ಸರಿ ಇದೆ.

**-Sd-**

**ಸಿವಿಲ್ ಜಡ್ಜ, ಮುಂಡಗೋಡ.**